**<u>ಸಾಕ್ಷಿಯನ್ನು ದಿಃ 04.04.2026 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಜೆ. ಆರ್. ಕೆ. ವಕೀಲರಿಂದ ವಾದ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ನಿವೇದಿಸಿಕೊಂಡಿರುತ್ತಾರೆ.</u>**

**ಪಾಟೀ ಸವಾಲು ಪ್ರತಿವಾದಿ 1 ಪರ ಶ್ರೀ ಕೆ.ಹೆಚ್.ಆರ್ ವಕೀಲರಿಂದಃ**

ಗಿರಿಯಮ್ಮಾ ಅವರಿಗೆ ನನ್ನ ತಾಯಿ ಒಬ್ಬಳೇ ಮಗಳು ಇರುತ್ತಾಳೆ ಎಂದರೆ ಸರಿ. ದಾವಾ ಸ್ವತ್ತು ಗಿರಿಯಮ್ಮಾ ಅವರಿಗೆ ಸರ್ಕಾರದಿಂದ ಮಂಜೂರು ಆಗಿತ್ತು ಎಂದರೆ ಸಾಕ್ಷಿ ಅವರ ತಂದೆ ಅವರಿಗೆ ಬಿಟ್ಟಿದ್ದರು ನಮಗೂ ಸಹ ನೀಡುತ್ತೇವೆಂದು ಹೇಳಿದ್ದರು ಎಂದು ನುಡಿಯುತ್ತಾರೆ. ಈ ಬಗ್ಗೆ ದಾಖಲೆ ನೀಡಿದ್ದೀರಾ ಎಂದರೆ ಸಾಕ್ಷಿ ಕಲ್ಪನಾ ವಕೀಲರಿಗೆ ಗೊತ್ತು ಎಂದು ಹೇಳುತ್ತಾರೆ. ದಾವಾ ಸ್ವತ್ತನು ಪ್ರತಿವಾದಿ 1 ಅವರ ತಾಯಿಗೆ ಸರ್ಕಾರದಿಂದ ಮಂಜೂರು ಆಗಿದ್ದು ಅವರ ತಂದೆಯ ಮನೆಯಿಂದ ಬಂದಿರುತ್ತದೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಕ್ರಯವಾದ ಬಳಿಕ ಹಣ ನನಗೆ ಸೇರಬೇಕೆಂದು ಎಲ್ಲರೂ ಒಪ್ಪಿದ ಬಗ್ಗೆ ಬರೆಸಿದ್ದು ಈ ಬಗ್ಗೆ ಕಾರಾರು ಪತ್ರದಲ್ಲಿ ಬರೆಸಿದ್ದಿರಾ ಎಂದರೆ ಸಾಕ್ಷಿ ಬರೆದಿರುತ್ತಾರೆಂದು ಹೇಳುತ್ತಾರೆ. ಈ ಬಗ್ಗೆ ಕರಾರು ಪತ್ರದಲ್ಲಿ ಯಾವುದೇ ಒಕ್ಕಣಿ ಇರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಹೊರತು ಪಡಿಸಿ ನನ್ನ ತಂದೆಯ ಮನೆಯ ಆಸ್ತಿಗಳಿಗೆ ಸಂಬಂಧಿಸಿದಂತೆ ಓಎಸ್ 326/2019 ರಂತೆ ಕೆಳ ನ್ಯಾಯಾಲಯದಲ್ಲಿ ದಾವ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ಈ ದಾವಾ ಆಸ್ತಿಯನ್ನು ಸಹ ಸೇರಿಸಿರುತ್ತೇನೆಂದು ಹೇಳುತ್ತಾರೆ. ಸದರಿ ದಾವೆಯಲ್ಲಿ ಈ ದಾವಾ ಸ್ವತ್ತನ್ನು ಸೇರಿಸಿರುವ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕಲ್ಪನಾ ವಕೀಲರಿಗೆ ಗೊತ್ತು ಹಾಕಿರುತ್ತೇವೆಂದು ಎಂದು ಹೇಳುತ್ತಾರೆ. ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ. ಓಎಸ್ 326/2019 ಯಲ್ಲಿ ಏನು ಪರಿಹಾರ ಕೋರಿ

ದಾವೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ನನ್ನ ಗಂಡನಿಗೆ ಗೊತ್ತು ಎಂದು ಹೇಳುತ್ತಾರೆ.

ನನ್ನ ಮತ್ತು ನನ್ನ ಸಹೋದರಿಯ ಮದುವೆಯನ್ನು ಪ್ರತಿವಾದಿ 1 ಅವರು ಮಾಡಿರುತ್ತಾರೆ ಎಂದರೆ ಸಾಕ್ಷಿ ನನ್ನ ಅಜ್ಜಿ ಮಾಡಿರುತ್ತಾರೆಂದು ಹೇಳುತ್ತಾರೆ. ನನ್ನ ತಾಯಿಯೇ ನನ್ನ ಮತ್ತು ಸಹೋದರಿಯ ಮದುವೆ ಮಾಡಿದ್ದು ನಾನು ಸುಳ್ಳು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಓಎಸ್ 326/2019 ರಲ್ಲಿ ಕೆಳ ನ್ಯಾಯಾಲಯದಲ್ಲಿ ದಾನ ಪತ್ರದ ಆಧಾರದ ಮೇರೆಗೆ ಘೋಷನಾತ್ಮಕ ಪರಿಹಾರ ಕೋರಿದ್ದು ಸದರಿ ದಾನ ಪತ್ರವನ್ನು ಪ್ರತಿವಾದಿ 1 ಅವರು ಎಸಿ ನ್ಯಾಯಾಯದಲ್ಲಿ ವಜಾ ಮಾಡಿಸಿಕೊಂಡು ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಸದರಿ ದಾನ ಪತ್ರವನ್ನು ನನ್ನ ತಾಯಿಗೆ ಗೊತ್ತಿಲ್ಲದಂತೆ ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನನ್ನು ನನ್ನ ತಾಯಿ ಮತ್ತು ಅಜ್ಜಿ ಕರೆದುಕೊಂಡು ಬಂದಿರುತ್ತಾರೆಂದು ಹೇಳುತ್ತಾರೆ.

ನನ್ನ ಮತ್ತು ನನ್ನ ಸಹೋದರಿಯ ಮದುವೆ ಬಳಿಕ ಪ್ರತಿವಾದಿ 1 ಅವರು ಬೇರೆ ವಾಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಹಣವನ್ನು ಪಡೆದುಕೊಂಡು ನನ್ನ ಸಹೋದರಿಯಗೆ ನೀಡಿದ್ದು ಬೇರೆ ವಾಸ ಮಾಡುತ್ತಿಲ್ಲವೆಂದು ಹೇಳುತ್ತಾರೆ. ನಾನು ಮತ್ತು ಪ್ರತಿವಾದಿ 2 ಅವರು ಪ್ರತಿವಾದಿ 1 ಅವರನ್ನು ನೋಡಿಕೊಳ್ಳುತ್ತಿಲ್ಲ ಅವರು ಬೇರೆ ಕಡೆ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರಿ ಪ್ರತಿವಾದಿ 1 ಅವರ ಯೋಗಕ್ಷೇಮವನ್ನು ನೋಡಿಕೊಳ್ಳದೇ ಇರುವ ಕಾರಣ ಅವರು ಎಸಿ ನ್ಯಾಯಾಲಯದಲ್ಲಿ ನಾವು ಸೃಷ್ಟಿ ಮಾಡಿದ ದಾನಪತ್ರವನ್ನು ರದ್ದು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಅಜ್ಜಿ ನನ್ನನ್ನು ಕರೆದುಕೊಂಡು ಬಂದು ಸಾಕಿದ್ದರ ಬಗ್ಗೆ ಮತ್ತು ಆಸ್ತಿಯನ್ನು ನೀಡುತ್ತೇನೆಂದು ಹೇಳಿದ ಬಗ್ಗೆ ದಾಖಲೆ ಇರುತ್ತದೆ ಎಂದು ಹೇಳುತ್ತಾರೆ. ಈ ಪ್ರಕರಣದಲ್ಲಿ ಪ್ರತಿವಾದಿ 1 ಅವರು ಸಲ್ಲಿಸಿದ ದಾಖಲೆಗಳನ್ನು ನಾನು ವಕೀಲರ ಮೂಲಕ ತಿಳಿದುಕೊಂಡಿರುತ್ತೇನೆ.

ಪ್ರತಿವಾದಿ 1 ಅವರು ಸಲ್ಲಿಸಿದ ಸಾಗುವಳಿ ಚೀಟಿಯನ್ನು ನೋಡಿದ್ದೀರಾ ಮತ್ತು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನನಗೆ ಈ ಬಗ್ಗೆ ಗೊತ್ತಾಗುವುದಿಲ್ಲವೆಂದು ಹೇಳುತ್ತಾರೆ. ಸದರಿ ಸಾಗುವಳಿ ಚೀಟಿ ಪ್ರಕಾರ ದಾವಾ ಸ್ವತ್ತು ನನ್ನ ಅಜ್ಜಿಗೆ ಸರ್ಕಾರದಿಂದು ಮಂಜುರಾಗಿದ್ದು ನಾನು ಅವರ ತಂದೆಯಿಂದ ಬಂದಿರುತ್ತದೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಮಗೆ ಸೇರಬೇಕೆಂದು ನಾನು ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತೇನೆ. ನಾನು ಯಾವುದೇ ದಾವೆ ಸಲ್ಲಿಸಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಈಗಲೂ ಸಹ ಲಕ್ಕಮ್ಮಾ ಅವರ ಹೆಸರಿಗೆ ಪಹಣಿ ಬರುತ್ತಿದೆ ಎಂದರೆ ಸಾಕ್ಷಿ ಅವರು ಮಾಡಿಸಿರುತ್ತಾರೆ ಬರುತ್ತಿದೆ ಎಂದು ಹೇಳುತ್ತಾರೆ. ಲಕ್ಕಮ್ಮಾ ಅವರ ತಾಯಿಯ ಮರಣಾ ನಂತರ ಗಿರಿಯಮ್ಮಾ ಅವರಿಗೆ ನಾನೊಬ್ಬಳೆ ವಾರಸ್ಸುದಾರಳು ಇರುತ್ತೇನೆಂದು ಎಂ.ಆರ್ 25/1999-2000 ರಂತೆ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಎಂ.ಆರ್ ಅನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ. ನನಗೆ ಯಾವುದೇ ಹಕ್ಕು ಇಲ್ಲದೇ ಇರುವ ಕಾರಣ ನಾನು ಅದನ್ನು ಪ್ರಶ್ನೆ ಮಾಡಿಲ್ಲ ಹಾಗೂ ಸದರ ಸ್ವತ್ತಿನಲ್ಲಿ ಪ್ರತಿವಾದಿ 1 ಅವರಿಗೆ ಮಾತ್ರ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

ಪ್ರತಿವಾದಿ 1 ಅವರಿಗೆ ಎಷ್ಟು ವಯಸ್ಸು ಎಂದರೆ ಸಾಕ್ಷಿ ಗೊತ್ತಿಲ್ಲವೆಂದು ಹೇಳುತ್ತಾರೆ. ಪ್ರತಿವಾದಿ 1 ಅವರಿಗೆ ಬಿಪಿ ಮತ್ತು ಸಕ್ಕರೆ ಕಾಯಿಲೆ ಇರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲವೆಂದು ಹೇಳುತ್ತಾರೆ. ನಾನು ಪ್ರತಿವಾದಿ 1 ಅವರನ್ನು ನೋಡಿಕೊಂಡಲ್ಲಿ ನನಗೆ ಈ ಬಗ್ಗೆ ಗೊತ್ತಿರುತ್ತಿತ್ತು ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಸಹೋದರಿಯ ಮದುವೆಗೆ ಮಾಡಿದ ಸಾಲ ತಿರುವಳಿಗೆ ಮತ್ತು ಜೀವನೋಪಾಯಕ್ಕಾಗಿ ಮಾಡಿದ ಕೈ ಸಾಲದ ತಿರುವಳಿಗಾಗಿ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲಿ ತಯಾರು ಮಾಡಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ.

ಸಾಕ್ಷಿ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯರ ಕುಟುಂಬದ ಸಾಲ ತಿರುವಳಿಗಾಗಿ ದಾವಾ ಸ್ವತ್ತನ್ನು ಮಾರಾಟ ಮಾಡುವ ಬಗ್ಗೆ ತಿರ್ಮಾನ ಮಾಡಿದ್ದು ಎಂದು ನಾನು ಬರೆಸಿರುವುದಿಲ್ಲವೆಂದು ಹೇಳುತ್ತಾರೆ. ಕ್ರಯದ ಮುಂಗಡ ಹಣದಲ್ಲಿ ನನ್ನ ಮತ್ತು ನನ್ನ ಸಹೋದರಿಯ ಮದುವೆಗೆ ಸಾಲವನ್ನು ಮತ್ತು ಕೈ ಸಾಲವನ್ನು ತಿರುವಳಿಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಇವತ್ತಿಗೂ ಸಹ ಪ್ರತಿವಾದಿ 1 ಅವರ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದು ನನಗೆ ಯಾವುದೇ ಹಕ್ಕು ಇರುವುದಿಲ್ಲವೆಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ಪ್ರತಿವಾದಿ 1 ಅವರಿಗೆ ಮಾತ್ರ ಹಕ್ಕು ಇದ್ದು ಉಳಿದ ಕ್ರಯದ ಹಣ ಅವರಿಗೆ ಮಾತ್ರ ಸೇರಿಬೇಕು ಎಂದರೆ ಸರಿಯಲ್ಲ. ವಾದಿ ನಮ್ಮ ಸಹಿಗಳನ್ನು ಕ್ರಯದ ಕರಾರು ಪತ್ರಕ್ಕೆ ಬದ್ರತೆಗಾಗಿ ಪಡೆದಿದ್ದು ಈ ಬಗ್ಗೆ ಪ್ರತಿವಾದಿ 1 ಅವರಿಗೆ ಮಾಹಿತಿ ಇರುವುದಿಲ್ಲ ಅವರಿಗೆ ಪ್ರತಿವಾದಿ 1 ಅವರಿಗೆ ಮಾತ್ರ ದಾವಾ ಸ್ವತ್ತಿನಲ್ಲಿ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

**ಪ್ರತಿವಾದಿ 2 ಪರ ವಕೀಲರು ಈ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ,

ಕುಣಿಗಲ್